ಆಟೊ ಇಲ್ಲಿಂದ ಹೋಗಿದೆ ಎಂದು ಖಚಿತಪಡಿಸಿದರು. ಇನ್ನೂ ಹತ್ತು ನಿಮಿಷ ಕಾದದ್ದಾಯಿತು. ಅಲ್ಲಿಗೆ ರಾತ್ರಿ ಹನ್ನೆರಡಾಗಿತ್ತು. ಆಟೋನೂ ಇಲ್ಲ, ರೀಲ್ ತರುತ್ತಿದ್ದ ವಿರುಪಾಕ್ಷಿಯೂ ಇಲ್ಲ. ಥಿಯೇಟರ್‌ನಲ್ಲಿದ್ದ ಜನ ಕೂಗು ಹಾಕಲು ಶುರುಮಾಡಿ ನನ್ನ ಮಾವನ ವಂಶವನ್ನೆಲ್ಲಾ ಜಾಲಾಡಿದರು. ಕೆಲವರು ಬೆಂಕಿ ನಂದಿಸಲು ಇಟ್ಟಿದ್ದ ಮರಳಿನ ಬಕೆಟ್‌ಗಳನ್ನು ಮೇಲೆ ತೂರಿದರು. ನೆಲದಲ್ಲಿ ಕೂತವರೆಲ್ಲಾ ಮಣ್ಣುತೂರಿ ಇಡೀ ಥಿಯೇಟರ್‌ನಲ್ಲಿ ಗೊಂದಲ ಸೃಷ್ಟಿಸಿದರು. ಅಷ್ಟರಲ್ಲಿ ಪರಿಸ್ಥಿತಿಯ ಗಂಭೀರತೆಯನ್ನರಿತ ಮಾವ 'ಕಾರಣಾಂತರಗಳಿಂದ ಪ್ರದರ್ಶನ ರದ್ದಾಗಿದೆ. ನಾಳೆ ಮತ್ತೆ ಚಿತ್ರವನ್ನು ಪ್ರದರ್ಶಿಸಲಾಗುವುದು, ಇವತ್ತಿನ ಟಿಕೆಟನ್ನೇ ಉಪಯೋಗಿಸಬಹುದು' ಎಂದು ಮೈಕ್‌ನಲ್ಲಿ ಅನೌನ್ಸ್ ಮಾಡಿದ. ಜನ ಸಿಕ್ಕಾಪಟ್ಟೆ ಬೈದುಕೊಂಡು ಟಾಕೀಸಿನಿಂದ ಹೊರಟರು. ಅದರಲ್ಲೂ 'ಮಯೂರ' ಸಿನಿಮಾವನ್ನು ಪೂರ್ತಿ ನೋಡಲಾಗದ ಜನ ತಮ್ಮ ಸ್ವಾಭಿಮಾನಕ್ಕೇ ಪೆಟ್ಟು ಬಿದ್ದಂತೆ ಭಾವಿಸಿ, 'ಲೇ ವೀರಭದ್ರಿ, ನಾಳೆ ಸಿನಿಮಾ ತೋರಿಸದಿದ್ರು, ನಿನ್ನ ಟಾಕೀಸೇ ಇಲ್ಲದಂಗೆ ಮಾಡ್ತೀವಿ ನೋಡು' ಎಂದು ಧಮಕಿ ಹಾಕಿ ಹೋದರು.

ರಾತ್ರಿ ಒಂದರ ಸುಮಾರಿಗೆ ಒದ್ದೆ ಮುದ್ದೆಯಾಗಿದ್ದ ವಿರುಪಾಕ್ಷಿ ಆಟೊ ಡ್ರೈವರ್ ಜೊತೆ ರೀಲ್ ಹೊತ್ತುಕೊಂಡು ಬಂದ. ಕೇಳಿದ್ದಕ್ಕೆ ಮಾವ, 'ದಾರ್‍ಯಾಗ ಭಾರೀ ಮಳೀ ಬಂತು. ಕಡತಿ ಹತ್ತಿರ ಅಟೋ ಗಾಲಿ ಕೆಸರಿನಲ್ಲಿ ಸಿಕ್ಕೊಂಡು ಬಿತ್ತು. ಹೊರಗಾ ಬರ್‍ಲಿಲ್ಲ. ಅದಕ್ಕೆ ನಡಕೊಂಡೇ ಬಂದೆ' ಎಂದು ಅಲವತ್ತುಕೊಂಡ. ನಿಜಕ್ಕೂ ಭಾರೀ ಮಳೆ ಬಂದಿತ್ತು. ಹೇಳಿ ಕೇಳಿ ರೇವತಿ ಮಳೆ. ಆಟೊ ಬರುತ್ತಿದ್ದ ದಾರಿ ಮಣ್ಣಿನ ರಸ್ತೆಯಾದ್ದರಿಂದ ಮಳೆಯಿಂದ ಕೆಸರುಮಯವಾಗಿ ಆಟೊ ಹೂತು ಹೋಗಿತ್ತು. ಆಯಿತು, 'ನಾಳೆ ಬೆಳಗ್ಗೆ ಅಷ್ಟೊತ್ತಿಗೆ ಎಲ್ಲಾ ರೀಲ್ ವಾಪಸ್ ಕೊಡು, ಮತ್ತೆ ತಂದರಾಯಿತು' ಎಂದ.

ಮರುದಿನ ಬಂತು. ಫ್ರೀ ಎಂದು ಹೇಳಿದ್ದರಿಂದ ಮತ್ತೆ ಜನ ಜಾತ್ರೆಯೇ ನೆರೆಯಿತು. ಜನ ಥಿಯೇಟರ್‌ಗೆ ಹೋಗುವ ಮುನ್ನ ಪ್ರೊಜೆಕ್ಟರ್ ರೂಂ ಬಳಿಬಂದು 'ನಿನ್ನೆ ಮಾಡಿದಂಗೆ ಮಾಡಿದ್ರೆ, ನಿನ್ನ ಸುಮ್ಮೆ ಬಿಡಾದಿಲ್ಲ' ಎಂದು ವೀರಭದ್ರನಿಗೆ ಧಮಕಿ ಹಾಕಿ, ಥಿಯೇಟರ್ ಒಳಗೆ ಹೋಗಿ ಕುಳಿತರು. ಅಲ್ಲಿಯೇ ಇದ್ದ ಮಾವ, 'ಇವತ್ತು ಹಂಗಾಗಲ್ಲ ನಡೀರಿ', ಎಂದು ಸಮಾಧಾನದ ಮಾತು ಹೇಳಿದ.

ಯಥಾ ಪ್ರಕಾರ ಆಟೋದಲ್ಲಿ ಮೊದಲ ಅರ್ಧದ ಶೋನ ರೀಲ್ ಬಂದವು. ಇಂಟರ್‌ವಲ್‌ವರೆಗೆ ಸಿನಿಮಾ ಭರ್ಜರಿಯಾಗಿ ನಡೆಯಿತು. ರಾಜ್‌ಕುಮಾರ್ ಕನ್ನಡ ಸಾಮ್ರಾಜ್ಯ ಕಟ್ಟುವ ಪ್ರತಿಜ್ಞೆಯೊಂದಿಗೆ ವಿರಾಮ ನೀಡಲಾಯಿತು. ಇಂಟರ್‌ವಲ್ ನಂತರದ ರೀಲ್‌ಗಳೂ ಬಂದವು. ಜನ ಪ್ರೊಜೆಕ್ಟರ್ ರೂಂಗೆ ಬಂದು ಖಾತ್ರಿ ಪಡಿಸಿಕೊಂಡು ಹೋಗಿ ಕೂತರು. ವೀರಭದ್ರ ಸ್ಪೂಲ್ ಚೆಕ್ ಮಾಡಿಕೊಂಡು ಪ್ರೊಜೆಕ್ಟರ್‌ಗೆ ಹಾಕಿ ಹೊರ ಬಂದು ನಿರಾತಂಕವಾಗಿ ಬೀಡಿ ಹಚ್ಚಿದ. ಒಂದೇ ನಿಮಿಷ. ಜನರಿಂದ ಹೋ ಎಂಬ ಕೂಗಾಟ ಶುರುವಾಯಿತು. ಮತ್ತೇನಾಯಿತು ಎಂದು ಭಾಯಗೊಂಡ ವೀರಭದ್ರ ಪ್ರೊಜೆಕ್ಟರ್ ಕಿಂಡಿಯಿಂದ ನೋಡಿದ. ಜನರೆಲ್ಲ ಎದ್ದು ನಿಂತು ಕೂಗುತ್ತಿದ್ದಾರೆ. ಸ್ಕ್ರೀನ್ ಮೇಲೆ ಏನು ಬರುತ್ತಿದೆ ಎಂಬುದೂ ಕಾಣದಷ್ಟು ಗಲಾಟೆ ಮತ್ತು ಧೂಳು. ತುಂಬಾ ನಿರುಕಿಸಿ ನೋಡಿದಾಗ ಗೊತ್ತಾಯಿತು. ಅವನ ಎದೆ ಧಸಕ್ಕೆಂದಿತು. ರಾಜ್‌ಕುಮಾರ್ ಪ್ಯಾಂಟು–ಶರ್ಟ್‌ನಲ್ಲಿದ್ದರು, ನಟಿ ಗಾಯಿತ್ರಿಯ ಜೊತೆಗಿನ ಮಾತಿನ ದೃಶ್ಯ ಮೂಡಿಬರುತ್ತಿತ್ತು. ಬಂದ ರೀಲ್‌ಗಳು 'ವಸಂತಗೀತ' ಸಿನಿಮಾದ್ದು. 'ಮಯೂರ' ಸಿನಿಮಾದ ರೀಲ್ ಬದಲು 'ವಸಂತಗೀತ' ಸಿನಿಮಾದ ದ್ವಿತೀಯಾರ್ಧದ ರೀಲ್‌ಗಳು ಬಂದು ಬಿಟ್ಟಿದ್ದವು. ಹರಿಹರದ ಟಾಕೀಸಿನಲ್ಲಿ ವಸಂತಗೀತ ರಿಲೀಸ್ ಆಗಿತ್ತು. ಪ್ರಿಂಟ್ ಕ್ವಾಲಿಟಿ ಚೆಕ್ ಮಾಡಿ ರೀಲ್ ಬಾಕ್ಸ್‌ಗಳನ್ನು ಅಲ್ಲಿಯೇ ಇಟ್ಟಿದ್ದರಂತೆ. ವಿರುಪಾಕ್ಷಿಯನ್ನು ನೋಡಿದ ಆಪರೇಟರ್ ಮಾಮೂಲಿನಂತೆ



ರೀಲ್ ಕೊಟ್ಟು ಕಳಿಸಿದ್ದಾನೆ. ನಿನ್ನೆ ಆದಂತೆ ಇವತ್ತಾಗಬಾರದು ಎಂದು ಅವಸರದಲ್ಲಿದ್ದ ವಿರುಪಾಕ್ಷ ತಕ್ಷಣ ಆಟೊ ಏರಿ ಹೊರಟಿದ್ದಾನೆ.

ಆಗ ದೊಡ್ಡ ಅಲ್ಲೋಲಕಲ್ಲೋಲವೇ ಆಗಿಹೋಯಿತು. ಟೆಂಟಿನ ತಾರಸಿ ಹಾರಿ ಹೋಗುವ ಹಾಗೆ ಕೂಗಾಟ ಶುರುವಾಯಿತು. ಮಾವ ಜನರನ್ನು ಸಮಾಧಾನಪಡಿಸಲು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದವು. ಇನ್ನೇನು ಸ್ಲೈಡ್ ಹಾಕಿ ಪ್ರಕಟಣೆ ಕೊಡಬೇಕೆನ್ನುವಷ್ಟರಲ್ಲಿ ಪ್ರೊಜೆಕ್ಟರ್ ಕಿಡಕಿಯ ಸಂದಿಯಿಂದ ತೂರಿಬಂದ ಕಲ್ಲೊಂದು ಸೀದಾ ಪ್ರೊಜೆಕ್ಟರ್‌ನ ಮುಂಭಾಗಕ್ಕೆ ಬಡಿದು ಲೆನ್ಸ್ ಕವರ್ ತುಂಡಾಗಿ ಹೋಯಿತು. ಹಿಂದೆಯೇ ಪ್ರೊಜೆಕ್ಟರ್ ರೂಮಿಗೆ ನುಗ್ಗಿದ ಹತ್ತಿಪ್ಪತ್ತು ಜನರ ಗುಂಪು ಆಪರೇಟರ್ ವೀರಭದ್ರಿಯನ್ನು ಅನಾಮತ್ತು ಎತ್ತಿಕೊಂಡು ಹೋಗಿ ಹೊರಗೆ ಬಿಸಾಕಿ, ಪ್ರೊಜೆಕ್ಟರ್ ರೂಂನ ಎಲ್ಲಾ ಸ್ವಿಚ್ ಆಫ್ ಮಾಡಿ ಬಾಗಿಲಿಗೆ ಚಿಲಕ ಹಾಕಿ, 'ಏನು ಹುಡುಗಾಟ ಆಡ್ತೀರಾ, ನಿಮಗ್ಯಾರಿಗೂ ಮಾನ ಮರ್ಯಾದಿ ಇಲ್ಲ. ಅದು ಹೆಂಗೆ ಸಿನಿಮಾ ತೋರ್‍ಸಾದಿಲ್ಲವೋ ನಾವೂ ನೋಡ್ತೀವಿ' ಎಂದು ಗಲಾಟೆ ಶುರುವಿಟ್ಟುಕೊಂಡರು. ಈ ಮಧ್ಯ ಪ್ಯಾಂಟು–ಶರ್ಟು ಧರಿಸಿದ್ದ ಯುವಕರ ಗುಂಪೊಂದು ಮಾವನ ಹತ್ತಿರ ಬಂದು, 'ನಮಗೆ ವಸಂತಗೀತಾನೆ ಹಾಕಿ, ಪಿಚ್ಚರ್ ಛಲೋ ಐತಿ, ನಾವು ಅದನ್ನೇ ನೋಡ್ತೀವಿ' ಎಂದು ವರಾತ ತೆಗೆದರು. ಅದನ್ನು ಕೇಳಿಸಿಕೊಂಡು ಹಿರಿಯರ ಗುಂಪು, 'ಅದೆಂಗಾಕತಿ ನಾವು ರೊಕ್ಕಾ ಕೊಟ್ಟಿದ್ದು ಮಯೂರ ಸಿನಿಮಾಕ್ಕ, ನಮಗ ಅದಾ ಬೇಕು, ಅದನ್ನು ಪೂರಾ ತೋರ್‍ಸಾತಂಕ ಇಲ್ಲಿಂದ ಕದಲಾಕಿಲ್ಲ' ಎಂದು ಹಟ ಹಿಡಿದು ಕುಳಿತರು. ಇದು ಹೊಸ ಸಮಸ್ಯೆಯನ್ನೇ ಸೃಷ್ಟಿಮಾಡಿತು. ಒಂದೊಂದು ಗುಂಪಿಗೆ ಒಂದೊಂದು ಸಿನಿಮಾ ಹೇಗೆ ತೋರಿಸುವುದು? ಅದಲ್ಲದೆ ಲೆನ್ಸ್ ಕವರ್ ಬೇರೆ ಡ್ಯಾಮೇಜ್ ಆಗಿದೆ. ಏನಪ್ಪಾ ಮಾಡುವುದು ಎಂದು ತಲೆಕೆಡಿಸಿಕೊಂಡಿದ್ದಾಗ, ಗಲಾಟೆಯ ಸುದ್ದಿ ಕೇಳಿ ಯಜಡಿ ಬೈಕ್‌ನಲ್ಲಿ ಟಾಕೀಸಿನ ಬಳಿ ಬಂದ ಪಂಚಾಯ್ತಿ ಛೇರ್‌ಮನ್, ಎಲ್ಲ ಜನರನ್ನು ಥಿಯೇಟರ್ ಮುಂಭಾಗದ ಜಾಗಕ್ಕೆ ಕರೆದು, 'ನೋಡ್ರಯ್ಯ ನೀವು ಹೀಂಗ ಗುಂಪು ಗುಂಪಾಗಿ ಎರಡೆರಡು ಸಿನಿಮಾ ತೋರ್‍ಸು ಅಂದ್ರೆ ಹೆಂಗಾಕಾತಿ, ಏನಾ ತಪ್ಪಾಗೇತಿ, ಏನು ಮಾಡಬೇಕಂತ ನಾಳೆ ಅನೌನ್ಸ್ ಮಾಡ್ತಾರ' ಎಂದು ಉದ್ರಿಕ್ತರನ್ನು ಸಾಗಹಾಕುವ ಮಾತಾಡಿದ. ಅದಕ್ಕೂಪ್ಪದ ಜನ 'ಮಯೂರ ರಗಡ ಒಳ್ಳೇ ಪಿಚ್ಚರ್‍ರು, ಸೀನ್ರಿ ಭಾಳ ಛಲೋ ಅದಾವು, ನಮಗ ಅದಾ ಬೇಕು' ಎಂದು ಹಟ ಹಿಡಿದರು. ಯುವಕರ ಗುಂಪು 'ಅದೆಂಗಾಕತೀ, ವಸಂತಗೀತಾದಾಗ ಹಾಡು, ಫೈಟು, ಪಸಂದದಾವು. ಅದಲ್ದ ಇದು ಮಯೂರಕ್ಕಿಂತ ಹೊಸಾಪಿಚ್ಚರ್‍ರು, ನಮಗ ಅದಾ ಬೇಕು' ಎಂದು ತೋಳೇರಿಸಿ ನಿಂತರು.

ಆಗ ನಮ್ಮ ಮಾವ ಮುಂದೆ ಬಂದು, 'ನೋಡ್ರಪಾ, ತಪ್ಪು ನಮ್ದು. ಸರೀನೂ ನಾವೇ ಮಾಡ್ತೀವಿ. ಎರಡೂ ರಾಜ್‌ಕುಮಾರ್ ಪಿಚ್ಚರ್‍ರೇ, ಒಂದಕಿಂತ ಒಂದು ಚೆನ್ನಾಗಿದಾವೆ, ಎರಡೂ ಸಿನಿಮಾ ತೋರುಸ್ತೀವಿ. ನಾಳೆ ಮಯೂರ, ನಾಡಿದ್ದು ವಸಂತಗೀತ, ಆತೇನ್ರಪ' ಎಂದು ಅನೌನ್ಸ್ ಮಾಡಿದ. ಅದಕ್ಕೆ ಎರಡೂ ಗುಂಪಿನ ಮುಂದಾಳುಗಳು, 'ಛೇರ್‍ಮನ್ರೇ ಇದಕ್ಕ ನೀವೇಸಾಕ್ಷಿ, ಮತ್ತೇನರ ಅಪರಾ ತಪರಾ ಮಾಡಿದ್ರ, ಅವತ್ತು ಟಾಕೀಸೇ ಇರಂಗಿಲ್ಲ' ಎಂದು ಗರ್ಜಿಸಿ, 'ಬರ್‍ರಲೇ ನಾಳೆ ಬರಾನ, ಅವನೌವ್ವನ ಏನ್ ತೋರುಸ್ತಾನ, ನೋಡೇ ಬಿಡಾಣ' ಎಂದು ಊರಕಡೆ ಮುಖ ಮಾಡಿ ಹೊರಟರು.

ಮಾತುಕೊಟ್ಟಂತೆ ಮಾವ, ಚಿತ್ರದುರ್ಗಕ್ಕೇ ಹೋಗಿ, ನೇರ ಹಂಚಿಕೆದಾರರಿಂದಲೇ ಚಿತ್ರದ ಬಾಕ್ಸ್ ತಂದು ಎರಡೂ ಸಿನಿಮಾಗಳನ್ನು ತೋರಿಸಿ ಮಾತುಳಿಸಿಕೊಂಡ. ಜನ 'ಮಯೂರ'ದ ಹೊಸ ಪ್ರಿಂಟ್ ನೋಡಿ, 'ಭೇಷ್, ಪ್ರಿಂಟ್ ಅಂದ್ರ ಇದು, ಆಕ್ಟಿಂಗ್ ಅಂದ್ರ ರಾಜಕುಮಾರ್‌ದು' ಎಂದು ಮಾವನಿಗೆ ಶಹಭಾಸ್‌ಗಿರಿ ನೀಡಿದರು. ವಸಂತಗೀತಾನೂ ನೋಡಿದ ಇದೇ ಜನ 'ಹಾಡು ಭಾಳ ಪಸಂದದಾವು, ರಾಜಕುಮಾರನ ಸಣ್ಣ ಮಗನೂ ಆಕ್ಟ್ ಮಾಡಿದ್ದು ಛಲೋ ಐತಿ' ಎಂದು ಸಂತಸ ವ್ಯಕ್ತಪಡಿಸಿದರು.